**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 252/2018

ಪಿಡಬ್ಲು :2 ಸಿಡಬ್ಲು : 11

| | |
|---|---|
| ಸಾಕ್ಷಿಯ ಹೆಸರು | : ಡಾಃ ಪುಷ್ಪಲತಾ ಸುಣ್ಣದಕಲ್ಲ |
| ತಂದೆಯ ಹೆಸರು | : ಶ್ರೀ.ಸೋಮಪ್ಪ ಸುಣ್ಣದಕಲ್ಲ |
| ವಯಸ್ಸು | : 51 ವರ್ಷ |
| ಉದ್ಯೋಗ | : ವೈದ್ಯಾಧಿಕಾರಿಗಳು, ಸಮುದಾಯ ಆರೋಗ್ಯ ಕೇಂದ್ರ, ಕಾಗವಾಡ |
| ವಾಸ್ತವ್ಯ | : ಕಾಗವಾಡ |
| ದಿನಾಂಕ | : 23-09-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 27-07-2017 ರಿಂದ ಈ ದಿನದವರೆಗೆ ನಾನು ಕಾಗವಾಡ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 16-09-2018 ರಂದು ಬೆಳಗ್ಗೆ 9:35 ಗಂಟೆ ಸಮಯದಲ್ಲಿ ಆಸ್ಪತ್ರೆಯಲ್ಲಿ ನಾನು ಕರ್ತವ್ಯದಲ್ಲಿದ್ದಾಗ ಇಂಗಳಿ ಗ್ರಾಮದ ಸುಮಾರು 38 ವರ್ಷ ವಯಸ್ಸಿನ ಸುರೇಶ ಕೃಷ್ಣಪ್ಪ ನಾಯಕ ಎನ್ನುವವರು ಹಲ್ಲೆಯ ಇತಿಹಾಸದೊಂದಿಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಭೇಟಿ ನೀಡಿದ್ದರು. ದಿನಾಂಕಃ 15-09-2018 ರಂದು ರಾತ್ರಿ 11:15 ರ ಸಮಯದಲ್ಲಿ ಹಲ್ಲೆ ಆಗಿದೆ ಎಂದು ಹೇಳಿದ್ದರು. ಕಾಗವಾಡ ಪೋಲಿಸರು ಗಾಯಾಳು ಸುರೇಶ ಕೃಷ್ಣಪ್ಪ ನಾಯಕ ಎನ್ನುವವರನ್ನು ಪರೀಕ್ಷಿಸಿ ವರದಿ ಮಾಡುವಂತೆ ಮನವಿ ಮಾಡಿದ್ದರು. ಅದರಂತೆ ನಾನು ಪರೀಕ್ಷೆ ಮಾಡಿದ್ದೇನೆ. [ಪೋಲಿಸರು ನೀಡಿದ್ದರು ಎನ್ನಲಾದ ಮನವಿ ಪತ್ರ ನ್ಯಾಯಾಲಯದ ಕಡತದಲ್ಲಿ ಲಭ್ಯ ಇರುವುದಿಲ್ಲ.]

3. ಗಾಯಾಳು ಸುರೇಶ ಕೃಷ್ಣಪ್ಪ ನಾಯಕ ಅವರ ಎಡಗೈನ ಮಧ್ಯದ ಬೆರಳು ಮತ್ತು ಉಂಗುರಬೆರಳಿನಲ್ಲಿ ಊತ ಇತ್ತು. ನಾನು ಅವುಗಳ ಮೂಳೆಗಳು ಮುರಿದಿರಬಹುದು ಎಂದು ಅನುಮಾನಪಟ್ಟು ಅವರನ್ನು ಹೆಚ್ಚಿನ ಪರೀಕ್ಷೆಗಾಗಿ ಸಿವಿಲ್ ಆಸ್ಪತ್ರೆ ಮಿರಜಗೆ ಶಿಫಾರಸ್ಸು ಪತ್ರ ನೀಡಿ ಕಳುಹಿಸಿಕೊಟ್ಟಿದ್ದೇನು. ಆದರೆ ಅವರು ಸದರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

4. ನಾನು ಚಿಕಿತ್ಸೆ ನೀಡಿದ ಪ್ರಕಾರ ಗಾಯಾಳು ಸುರೇಶ ನಾಯಕ ಅವರಿಗೆ ಆದ ಗಾಯಗಳು ಸಾಧಾರಣ ಸ್ವರೂಪದ ಗಾಯ ಆಗಿತ್ತು. ಅದು 6 ರಿಂದ 12 ಗಂಟೆಯ ಒಳಗೆ ಆದ ಗಾಯ ಆಗಿತ್ತು. ಆ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಗಾಯದ ಪ್ರಮಾಣ ಪತ್ರವನ್ನು ನಿಪಿ-2 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 [ಎ] ಎಂದು ಗುರುತಿಸಲಾಯಿತು.

5. ಅದೇ ದಿನ ಅಂದರೆ ದಿನಾಂಕಃ 16-09-2018 ರಂದು ಬೆಳಗ್ಗೆ 9:30 ಗಂಟೆ ಸಮಯದಲ್ಲಿ ಆಸ್ಪತ್ರೆಯಲ್ಲಿ ನಾನು ಕರ್ತವ್ಯದಲ್ಲಿದ್ದಾಗ ಕುಸನಾಳ ಗ್ರಾಮದ ಸುಮಾರು 32 ವರ್ಷ ವಯಸ್ಸಿನ ಸಂಗಪ್ಪ ಬೋಪಾಲ ಕಾಂಬಳೆ ಎನ್ನುವವರು ಹಲ್ಲೆಯ ಇತಿಹಾಸದೊಂದಿಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಭೇಟಿ ನೀಡಿದ್ದರು. ದಿನಾಂಕಃ 15-09-2018 ರಂದು ರಾತ್ರಿ 11:15 ರ ಸಮಯದಲ್ಲಿ ಹಲ್ಲೆ ಆಗಿದೆ ಎಂದು ಹೇಳಿದ್ದರು. ಹೊಟ್ಟೆ ನೋವು ಮತ್ತು ಬೆನ್ನು ನೋವು ಎಂದು ಹೇಳಿದ್ದರು, ಅದರೆ ದೇಹದ ಹೊರಮೈ ಮೇಲೆ ಯಾವುದೇ ಗಾಯಗಳು ಇರಲಿಲ್ಲ. ಆ ಕಾರಣ ನಾನು ಅವರಿಗೆ ಯಾವುದೇ ಅಭಿಪ್ರಾಯವನ್ನು ನೀಡಿರುವುದಿಲ್ಲ. ಆ ಬಗ್ಗೆ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಪ್ರಮಾಣ ಪತ್ರವನ್ನು ನಿಪಿ-3 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-3 [ಎ] ಎಂದು ಗುರುತಿಸಲಾಯಿತು.

6. ಅದೇ ದಿನ ಅಂದರೆ ದಿನಾಂಕಃ 16-09-2018 ರಂದು ಬೆಳಗ್ಗೆ 9:40 ಗಂಟೆ ಸಮಯದಲ್ಲಿ ಆಸ್ಪತ್ರೆಯಲ್ಲಿ ನಾನು ಕರ್ತವ್ಯದಲ್ಲಿದ್ದಾಗ ಇಂಗಳಿ ಗ್ರಾಮದ ಸುಮಾರು 25 ವರ್ಷ ವಯಸ್ಸಿನ ನಿತಿನ್ ಭಾಗವತ ಕಾಂಬಳೆ ಎನ್ನುವವರು ಹಲ್ಲೆಯ ಇತಿಹಾಸದೊಂದಿಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಭೇಟಿ ನೀಡಿದ್ದರು. ದಿನಾಂಕಃ 15-09-2018 ರಂದು ರಾತ್ರಿ 11:15 ರ ಸಮಯದಲ್ಲಿ ಹಲ್ಲೆ ಆಗಿದೆ ಎಂದು ಹೇಳಿದ್ದರು. ಮಂಡಿಯ ಕೆಳಗೆ ಮಧ್ಯಭಾಗದಲ್ಲಿ ರಕ್ತ ಹೆಪ್ಪುಗಟ್ಟಿದಂತೆ 2X1 cm ನ ಗಾಯ ಆಗಿತ್ತು. ಎಡಕಾಲಿನಲ್ಲಿ ಮಂಡಿಯ ಕೆಳಗೆ 2 X 1/2 cm ನ ತರಚಿದ ಗಾಯ ಆಗಿತ್ತು. ಈ ಗಾಯಗಳು ನಾನು ಪರೀಕ್ಷಿಸುವ 6 ರಿಂದ 12 ಗಂಟೆಯ ಒಳಗೆ ಆಗಿದ್ದವು. ಅವುಗಳು ಸಾಧಾರಣ ಸ್ವರೂಪದ ಗಾಯಗಳಾಗಿದ್ದವು ಮತ್ತು ಗಾಯಗಳು ಗಟ್ಟಿಯಾದ ಮತ್ತು ಮೊಂಡಾದ ವಸ್ತುಗಳಿಂದ ಆಗಿರುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟು ವರದಿಯನ್ನು ನೀಡಿದ್ದೇನೆ. ವರದಿಯನ್ನು ನಿಪಿ-4 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-4 [ಎ] ಎಂದು ಗುರುತಿಸಲಾಯಿತು.

7. ಸುರೇಶ ನಾಯಕ ಮತ್ತು ನಿತಿನ್ ಕಾಂಬಳೆ ಅವರಿಗೆ ಆಗಿದ್ದ ಗಾಯಗಳು ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎ.ಸಿ.ಪಿ ವಕೀಲರಿಂದ**

ನಾನು ಪರೀಕ್ಷಿಸಿದ ಮೂರು ಜನ ಗಾಯಾಳುಗಳು ಯಾವ ಪೋಲಿಸ ಠಾಣೆಯ ಯಾವ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿಕಿತ್ಸೆಗಾಗಿ ಬಂದಿದ್ದರು ಎಂದು ನಾನು ನಿಪಿ-2, ನಿಪಿ-3 ಮತ್ತು ನಿಪಿ-4 ರಲ್ಲಿ ನಮೂದು ಮಾಡಿಲ್ಲ ಎನ್ನುವುದು ಸರಿ. ಎಲ್ಲಿ ಹಲ್ಲೆ ಆಯಿತು, ಯಾವುದರಿಂದ ಹಲ್ಲೆ ಆಯಿತು ಎನ್ನುವುದನ್ನೂ ಸಹ ನಾನು ಗಾಯದ ಪ್ರಮಾಣ ಪತ್ರದಲ್ಲಿ ಬರೆದಿರುವುದಿಲ್ಲ ಎನ್ನುವುದು ಸರಿ.

2. ನಿಪಿ–2, ನಿಪಿ–3 ಮತ್ತು ನಿಪಿ–4 ಗಾಯದ ಪ್ರಮಾಣ ಪತ್ರಗಳಲ್ಲಿ ಗಾಯದ ಬಣ್ಣವನ್ನೂ ಸಹ ನಮೂದು ಮಾಡಿಲ್ಲ ಎನ್ನುವುದು ಸರಿ. ಗಾಯವು ಎಷ್ಟು ಸಮಯದಲ್ಲಿ ಆಗಿದೆ ಎನ್ನುವುದನ್ನು ಅದರ ಬಣ್ಣದಿಂದ ನಿರ್ಧರಿಸಲಾಗುತ್ತದೆ ಎನ್ನುವುದು ಸರಿ. ನಿಪಿ–2 ಮತ್ತು ನಿಪಿ–4 ರಲ್ಲಿ ಹೇಳಿರುವ ಗಾಯಗಳು 6 ರಿಂದ 12 ಗಂಟೆಯೊಳಗೆ ಆಗಿರಬಹುದು ಎಂದು ಹೇಳಲು ಯಾವುದೇ ಆಧಾರ ಇಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನಾನು ನೋಡಿ ಪರೀಕ್ಷಿಸಿದ್ದರಿಂದ ನಾನು ಬರೆದಿದ್ದೇನೆ ಎಂದು ಹೇಳಿದ್ದಾರೆ.

3. ನಿಪಿ–2 ರಲ್ಲಿ ಹೇಳಿರುವ ಗಾಯಾಳು ಸುರೇಶ ನಾಯಕ ಇವರ ಆದ ಗಾಯದ ಬಗ್ಗೆ ನಾನು ಎಕ್ಸರೇಯನ್ನು ತೆಗೆಸಿರುವುದಿಲ್ಲ. Phalanx ಎಂದರೆ ಸಣ್ಣ ಮೂಳೆ ಎನ್ನುವುದು ಸರಿ. ಬೆರಳಿನ ಸಣ್ಣ ಮೂಳೆ ಮುರಿದಿರಬಹುದು ಎನ್ನುವ ಬಗ್ಗೆ ಅನುಮಾನ ಇದೆ ಎಂದು ನಿಪಿ–2 ರಲ್ಲಿ ನಮೂದು ಮಾಡಿಲ್ಲ ಎನ್ನುವುದು ಸರಿಯಲ್ಲ.

4. ಗಟ್ಟಿಯಾದ ನೆಲದ ಮೇಲೆ ಬಿದ್ದಾಗಲೂ ಸಹ ಕೈ ಬೆರಳಿನ ಮೂಳೆ ಮುರಿಯುವ ಸಾಧ್ಯತೆ ಇದೆ ಎನ್ನುವುದು ಸರಿ. ಮಿರಜ ಸಿವಿಲ್ ಆಸ್ಪತ್ರೆಗೆ ಶಿಫಾರಸ್ಸು ಮಾಡಿ ಕಳುಹಿಸಿಕೊಟ್ಟ ಬಗ್ಗೆ ನಿಪಿ–2 ರಲ್ಲಿ ನಮೂದು ಮಾಡಿಲ್ಲ ಎನ್ನುವುದು ಸರಿ.

5. ಗಾಯಾಳು ಸುರೇಶ ಅವರು ಹೆಚ್ಚಿನ ಚಿಕಿತ್ಸೆಯನ್ನು ಬೇರೆ ಕೇಂದ್ರದಲ್ಲಿ ಪಡೆದಿರುವುದಿಲ್ಲ ಎಂದು ನಿಪಿ–2 ರಲ್ಲಿ ಬರೆದಿದ್ದು, ಅದನ್ನು ಪೋಲಿಸರಿಂದ ಮಾಹಿತಿ ಸಂಗ್ರಹಿಸಿ ಬರೆದಿದ್ದೇನೆ. ಈ ಮಾಹಿತಿಯನ್ನು ನಾನು ಪೋಲಿಸರಿಂದ ನಿಪಿ–2 ನ್ನು ನೀಡುವ ದಿನದಂದು ಪಡೆದಿದ್ದೇನೆ.

6. ಗಾಯಾಳು ಸುರೇಶ ನಾಯಕ ಹೆಚ್ಚಿನ ಚಿಕಿತ್ಸೆಯನ್ನು ಪಡೆದ ಬಗ್ಗೆ ನಾನು ಪೋಲಿಸರಿಂದ ದಾಖಲೆಯನ್ನು ಪಡೆದಿಲ್ಲ ಎನ್ನುವುದು ಸರಿ. ನಿಪಿ–4 ರಲ್ಲಿ ನಿತಿನ್ ಕಾಂಬಳೆ

ಅವರಿಗೆ ಆದ ರಕ್ತ ಹೆಪ್ಪುಗಟ್ಟಿದ ಗಾಯದ ಆಕಾರವನ್ನು ಬರೆದಿಲ್ಲ ಎನ್ನುವುದು ಸರಿ. ನಿಪಿ–4 ರಲ್ಲಿ ಬರೆದಿರುವ ಗಾಯಗಳು ಗಟ್ಟಿಯಾದ ನೆಲದ ಮೇಲೆ ಬಿದ್ದಾಗ ಆಗುವ ಸಾಧ್ಯತೆ ಇದೆ ಎನ್ನುವುದು ಸರಿ.

7. ಸಾಮಾನ್ಯವಾಗಿ ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಿದಾಗ ಹಲ್ಲೆ ಆದ ಸ್ಥಳದಲ್ಲಿ ಗುರುತು ಇರುತ್ತದೆ ಎನ್ನುವುದಕ್ಕೆ ಸಾಕ್ಷಿ ಆ ರೀತಿ ಆಗಲೇ ಬೇಕು ಎಂದು ಇಲ್ಲ ಎಂದು ಹೇಳಿದ್ದಾರೆ. ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಿದಾಗ ನಿಪಿ–2 ಮತ್ತು ನಿಪಿ–4 ರಲ್ಲಿ ನಮೂದು ಮಾಡಿರುವ ಗಾಯಗಳು ಆಗುವ ಸಾಧ್ಯತೆ ಇದೆ ಎಂದು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

8. ನಾನು ಮೂರು ಜನ ಗಾಯಾಳುಗಳನ್ನು ಪರೀಕ್ಷಿಸಿ ವರದಿ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಪೋಲಿಸರ ಹೇಳಿಕೆಯ ಮೇರೆಗೆ ನಿಪಿ–2, ನಿಪಿ–3 ಮತ್ತು ನಿಪಿ–4 ನೀಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.